# ರಾಷ್ಟ್ರೀಯ ಚಳುವಳಿಯಲ್ಲಿ ಕರ್ನಾಟಕದ ಅಸಹಕಾರ ಚಳುವಳಿ ಹಾಗೂ ಕಾನೂನು ಭಂಗ ಚಳುವಳಿಗಳ ಪಾತ್ರ

ರವಿ ಪಾಟೀಲ್
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಕ್ಕೇರಿ, ಬೆಳಗಾವಿ.

DOI: https://doi.org/10.5281/zenodo.17411690

## ABSTRACT:

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅಸಹಕಾರ ಚಳುವಳಿ ಮಹತ್ವದ ಹಂತವಾಗಿದೆ. ಮಹಾತ್ಮ ಗಾಂಧೀಜಿ, ಖಿಲಾಫತ್ ಚಳುವಳಿ ಹಾಗೂ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದ ಹಿನ್ನೆಲೆಯಲ್ಲಿಯೇ ಈ ಹೋರಾಟವನ್ನು ಪ್ರಾರಂಭಿಸಿದರು. ಕರ್ನಾಟಕದಲ್ಲಿ ಈ ಚಳುವಳಿ ರಾಷ್ಟ್ರೀಯ ಜಾಗೃತಿ ಮೂಡಿಸುವಲ್ಲಿ, ಜನರನ್ನು ಅಹಿಂಸಾ ಮಾರ್ಗದ ಹೋರಾಟಕ್ಕೆ ಒಗ್ಗೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿತು. ಮೈಸೂರು ರಾಜ್ಯ ಹಾಗೂ ಹಳೆಯ ಬಾಂಬೆ ಪ್ರೆಸಿಡೆನ್ಸಿಗೆ ಸೇರಿದ್ದ ಬೆಳಗಾವಿ, ಧಾರವಾಡ, ಬಳ್ಳಾರಿ, ಗುಲ್ಬರ್ಗ ಮೊದಲಾದ ಪ್ರದೇಶಗಳಲ್ಲಿ ಅಸಹಕಾರ ಚಳುವಳಿಯ ಪ್ರತಿಧ್ವನಿ ಕೇಳಿಸಿತು. ಅನೇಕ ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸಿದರು; ವಿದ್ಯಾರ್ಥಿಗಳು ಸರ್ಕಾರಿ ವಿದ್ಯಾಸಂಸ್ಥೆಗಳನ್ನು ತೊರೆದು ರಾಷ್ಟ್ರೀಯ ಶಾಲೆಗಳ ಸ್ಥಾಪನೆಗೆ ಕೈಜೋಡಿಸಿದರು. ರಾಷ್ಟ್ರೀಯ ಕಾನ್ಫರೆನ್ಸ್‌ಗಳು, ಸಭೆಗಳು, ಪ್ರತಿಭಟನೆಗಳು, ವಿದೇಶಿ ಬಟ್ಟೆಗಳ ಬಹಿಷ್ಕಾರ, ಮದ್ಯಪಾನ ತ್ಯಾಗ, ಖಾದಿ ಬಳಕೆ ಪ್ರಚಾರ ಇವು ಚಳುವಳಿಯ ಪ್ರಮುಖ ಮುಖವಾಗಿದ್ದವು. ಕರ್ನಾಟಕದಲ್ಲಿ ಚಳುವಳಿಯ ನೇತೃತ್ವ ವಹಿಸಿದವರಲ್ಲಿ ಆಲೂರ ವೆಂಕಟರಾವ್, ಎಸ್. ನಂಜುಂಡಯ್ಯ, ಬಿ.ಎಂ. ಶ್ರೀನಿವಾಸಯ್ಯ, ಎನ್. ಎಸ್. ಹರ್ಡೇಕರ್ ಮೊದಲಾದವರು ಉಲ್ಲೇಖನೀಯರಾಗಿದ್ದಾರೆ. ಮಹಿಳೆಯರು ಮತ್ತು ರೈತರೂ ಸಹ ಚಳುವಳಿಗೆ ತಮ್ಮದೇ ರೀತಿಯ ಕೊಡುಗೆ ನೀಡಿದ್ದಾರೆ. ಅಸಹಕಾರ ಚಳುವಳಿ ಭಾರತದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚೇತನಕ್ಕೆ ಪ್ರೇರಣೆ ನೀಡಿದಂತೆಯೇ, ಕರ್ನಾಟಕದ ಜನರಲ್ಲೂ ಸ್ವಾತಂತ್ರ್ಯ ಸ್ಫೂರ್ತಿ, ರಾಷ್ಟ್ರೀಯತೆ ಮತ್ತು ಸ್ವಾವಲಂಬನೆ ಮೌಲ್ಯಗಳನ್ನು ಬೇರೂರಿಸಿತು. ಈ ಚಳುವಳಿ ಮುಂದಿನ ನಾಗರಿಕ ಕಾನೂನುಭಂಗ ಚಳುವಳಿಗಳಿಗೆ ನೆಲೆಯಾದಂತಾಯಿತು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ 1930–34ರ ಅವಧಿಯಲ್ಲಿ ನಡೆದ ನಾಗರಿಕ ಕಾನೂನುಭಂಗ ಚಳುವಳಿ ಮಹತ್ವದ ತಿರುವು ನೀಡಿತು. ಮಹಾತ್ಮ ಗಾಂಧೀಜಿ ನೇತೃತ್ವದ ಉಪ್ಪು ಸತ್ಯಾಗ್ರಹದಿಂದ ಪ್ರಾರಂಭವಾದ ಈ ಹೋರಾಟವು ಕರ್ನಾಟಕದಲ್ಲಿಯೂ ಜನರನ್ನು ಅಹಿಂಸಾತ್ಮಕ ಹೋರಾಟದತ್ತ ಒಗ್ಗೂಡಿಸಿತು. ಕರ್ನಾಟಕದಲ್ಲಿ ಈ ಚಳುವಳಿಯ ಪ್ರಮುಖ ಅಂಗವಾಗಿ ಉಪ್ಪು ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಕರ ನಿರಾಕರಣೆ ಚಳುವಳಿ ನಡೆಯಿತು. ಮಂಗಳೂರು, ಉಡುಪಿ, ಕಾರವಾರ ಹಾಗೂ ಇತರ ಕರಾವಳಿ ಪ್ರದೇಶಗಳಲ್ಲಿ ಉಪ್ಪು ಕಾನೂನು ಉಲ್ಲಂಘನೆಯ ಕಾರ್ಯಕ್ರಮ ಜೋರಾಗಿ ನಡೆಯಿತು. ಧಾರವಾಡ, ಬೆಳಗಾವಿ, ಶಿವಮೊಗ್ಗ, ಬಳ್ಳಾರಿ ಮುಂತಾದ ಒಳನಾಡಿನ ಪ್ರದೇಶಗಳಲ್ಲಿ ವಿದೇಶಿ ಬಟ್ಟೆ ದಹನ, ಮದ್ಯದಂಗಡಿಗಳ ಬಹಿಷ್ಕಾರ, ತೆರಿಗೆ ಪಾವತಿಸದ ಹೋರಾಟಗಳು ನಡೆದವು. ಅನೇಕ ಸ್ವಾತಂತ್ರ್ಯ ಹೋರಾಟಗಾರರು ಬಂಧಿತರಾದರು.

ಕರ್ನಾಟಕದಲ್ಲಿ ಈ ಹೋರಾಟವನ್ನು ಮುನ್ನಡೆಸಿದವರಲ್ಲಿ ಎನ್. ಎಸ್. ಹರ್ಡಿಕರ್, ಆರ್.ಆರ್. ದಿವಾಕರ್, ಕರಮರ್ಕರ್ ಮೊದಲಾದ ಮುಖಂಡರು ಮತ್ತು 40,000 ಜನ ಸ್ವಯಂಸೇವಕರು ಮುಂತಾದವರು ಮಹತ್ವದ ಪಾತ್ರವಹಿಸಿದರು. ಮಹಿಳೆಯರು, ರೈತರು ಮತ್ತು ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆ ಈ ಚಳುವಳಿಯ ವಿಶಿಷ್ಟ ಲಕ್ಷಣವಾಗಿತ್ತು. ನಾಗರಿಕ ಕಾನೂನುಭಂಗ ಚಳುವಳಿ ಕರ್ನಾಟಕದಲ್ಲಿ ಸ್ವಾತಂತ್ರ್ಯದ ಅಭಿಲಾಷೆಯನ್ನು ಬಲಪಡಿಸಿತು. ಇದು ಕೇವಲ ರಾಜಕೀಯ ಹೋರಾಟವಲ್ಲದೆ, ಸಾಮಾಜಿಕ

ಜಾಗೃತಿ, ಆರ್ಥಿಕ ಸ್ವಾವಲಂಬನೆ ಮತ್ತು ಸಾಂಸ್ಕೃತಿಕ ಪುನರುತ್ಥಾನದ ಪ್ರೇರಣೆಯಾಯಿತು. ಈ ಚಳುವಳಿ "ಭಾರತ ಬಿಟ್ಟು" ಚಳುವಳಿಗೆ ನೆಲೆಯಾಗಿದ್ದು, ಕರ್ನಾಟಕದ ಇತಿಹಾಸದಲ್ಲಿ ಸ್ವಾತಂತ್ರ್ಯ ಚಳುವಳಿಯ ಬಲವಾದ ಹಂತವಾಗಿ ಗುರುತಿಸಲ್ಪಟ್ಟಿದೆ.

**KEYWORDS:**

ಅಸಹಕಾರ ಚಳುವಳಿ, ಕಾನೂನು ಭಂಗ ಚಳುವಳಿ, ಕರ್ನಾಟಕ, ಉಪ್ಪಿನ ಸತ್ಯಾಗ್ರಹ, ರಾಷ್ಟ್ರೀಯ ಜಾಗೃತಿ.

**ಪೀಠಿಕೆ:**

ಭಾರತದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಅಸಹಕಾರ ಚಳುವಳಿ (1920–1922) ಹಾಗೂ ನಾಗರಿಕ ಕಾನೂನುಭಂಗ ಚಳುವಳಿ (1930–1934) ಮಹತ್ವದ ಘಟ್ಟಗಳಾಗಿವೆ. ಈ ಹೋರಾಟಗಳು ಕೇವಲ ರಾಜಕೀಯ ಚಟುವಟಿಕೆಗಳಲ್ಲ, ಅವು ದೇಶದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಚೇತನವನ್ನು ಬದಲಿಸಿದ ಜನಸಾಗರದ ಚಳುವಳಿಗಳಾಗಿದ್ದವು. ಕರ್ನಾಟಕವೂ ಈ ಚಳುವಳಿಗಳಲ್ಲಿ ತನ್ನದೇ ಆದ ಸಕ್ರಿಯ ಪಾತ್ರವಹಿಸಿ, ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಅಪಾರ ಕೊಡುಗೆ ನೀಡಿದೆ. 1920ರಲ್ಲಿ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ ಮತ್ತು ಖಿಲಾಫತ್ ಚಳುವಳಿಯ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧೀಜಿ ಅಸಹಕಾರ ಚಳುವಳಿಯನ್ನು ಆರಂಭಿಸಿದರು. ಜನರಿಗೆ ಬ್ರಿಟಿಷರ ಆಳ್ವಿಕೆಯಿಂದ ದೂರ ಉಳಿದು, ಸ್ವಾವಲಂಬನೆ ಹಾಗೂ ಸತ್ಯಾಗ್ರಹದ ಮಾರ್ಗವನ್ನು ಅನುಸರಿಸುವಂತೆ ಕರೆ ನೀಡಿದರು. ಕರ್ನಾಟಕದಲ್ಲಿ ಬೆಳಗಾವಿ, ಧಾರವಾಡ, ಬಳ್ಳಾರಿ, ಮೈಸೂರು, ಗುಲ್ಬರ್ಗ ಮುಂತಾದ ಪ್ರದೇಶಗಳಲ್ಲಿ ಈ ಚಳುವಳಿ ವ್ಯಾಪಕವಾಗಿ ಪ್ರತಿಧ್ವನಿಸಿತು. ಅನೇಕ ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸಿದರು; ವಿದ್ಯಾರ್ಥಿಗಳು ಸರ್ಕಾರಿ ಶಿಕ್ಷಣವನ್ನು ತೊರೆದು ರಾಷ್ಟ್ರೀಯ ಶಾಲೆಗಳ ಸ್ಥಾಪನೆಗೆ ಕೈಜೋಡಿಸಿದರು; ವಿದೇಶಿ ಬಟ್ಟೆಗಳ ಬಹಿಷ್ಕಾರ, ಖಾದಿ ಬಳಕೆ ಪ್ರಚಾರ, ಮದ್ಯದಂಗಡಿಗಳ ತಡೆ ಮುಂತಾದ ಚಟುವಟಿಕೆಗಳು ನಡೆದವು. ಆಲೂರ ವೆಂಕಟರಾವ್, ಎನ್.ಎಸ್. ಹರ್ಡೇಕರ್ ಮೊದಲಾದ ಹೋರಾಟಗಾರರು ಜನರನ್ನು ಸ್ವಾತಂತ್ರ್ಯದ ದಾರಿಗೆ ಕೊಂಡೊಯ್ದರು.

1930ರಲ್ಲಿ ಗಾಂಧೀಜಿಯವರ ದಂಡಿ ಉಪ್ಪು ಸತ್ಯಾಗ್ರಹದಿಂದ ಪ್ರೇರಿತರಾಗಿ ಭಾರತಾದ್ಯಂತ ನಾಗರಿಕ ಕಾನೂನುಭಂಗ ಚಳುವಳಿ ಪ್ರಾರಂಭವಾಯಿತು. ಕರ್ನಾಟಕದಲ್ಲಿಯೂ ಈ ಹೋರಾಟವು ಉತ್ಸಾಹಭರಿತ ಪ್ರತಿಕ್ರಿಯೆಯನ್ನು ಪಡೆದಿತು. ಮಂಗಳೂರು, ಉಡುಪಿ, ಕಾರವಾರ ಮುಂತಾದ ಕರಾವಳಿ ಪ್ರದೇಶಗಳಲ್ಲಿ ಉಪ್ಪು ಕಾನೂನು ಉಲ್ಲಂಘನೆ ನಡೆಯಿತು. ಧಾರವಾಡ, ಬೆಳಗಾವಿ, ಶಿವಮೊಗ್ಗ, ಬಳ್ಳಾರಿ ಮುಂತಾದ ಒಳನಾಡಿನ ಪ್ರದೇಶಗಳಲ್ಲಿ ತೆರಿಗೆ ಪಾವತಿಸದ ಹೋರಾಟ, ವಿದೇಶಿ ವಸ್ತ್ರಗಳ ದಹನ, ಮದ್ಯಪಾನ ವಿರೋಧ ಚಟುವಟಿಕೆಗಳು ನಡೆದವು. ಈ ಸಂದರ್ಭದಲ್ಲಿ ಅನೇಕ ಹೋರಾಟಗಾರರು ಬಂಧಿತರಾಗಿ ಕಾರಾಗೃಹ ಜೀವನವನ್ನು ಅನುಭವಿಸಿದರು. ಮಹಿಳೆಯರು, ರೈತರು ಹಾಗೂ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಈ ಚಳುವಳಿಯ ವಿಶೇಷ ಲಕ್ಷಣವಾಗಿತ್ತು.

ಅಸಹಕಾರ ಮತ್ತು ನಾಗರಿಕ ಕಾನೂನು ಭಂಗ ಚಳುವಳಿಗಳು ಕರ್ನಾಟಕದ ಸಮಾಜದಲ್ಲಿ ಸ್ವಾತಂತ್ರ್ಯದ ಚೇತನವನ್ನು ಬಲಪಡಿಸಿದವು. ಜನಸಾಮಾನ್ಯರಲ್ಲಿ ರಾಷ್ಟ್ರೀಯತೆ, ಸ್ವಾಭಿಮಾನ ಹಾಗೂ ಅಹಿಂಸಾತ್ಮಕ ಹೋರಾಟದ ನಂಬಿಕೆಯನ್ನು ಬೇರೂರಿಸಿದವು. ಈ

ಚಳುವಳಿಗಳು "ಭಾರತ ಬಿಟ್ಟು" ಚಳುವಳಿಗೆ ನೆಲೆಯಾದವು ಎಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದ ಕರ್ನಾಟಕದ ಇತಿಹಾಸದಲ್ಲಿ ಈ ಎರಡು ಚಳುವಳಿಗಳು ಕೇವಲ ಸ್ವಾತಂತ್ರ್ಯ ಹೋರಾಟದ ಹಂತಗಳಲ್ಲ, ಬದಲಾಗಿ ಜನರ ಆತ್ಮಸಾಕ್ಷಾತ್ಕಾರ, ಸಾಂಸ್ಕೃತಿಕ ಪುನರುತ್ಥಾನ ಮತ್ತು ರಾಜಕೀಯ ಜಾಗೃತಿಯ ನಿರ್ದರ್ಶನಗಳಾಗಿ ಪರಿಗಣಿಸಲ್ಪಟ್ಟಿವೆ. ಇವು ಭಾರತದ ಸ್ವಾತಂತ್ರ್ಯ ಹೋರಾಟದ ಒಂದು ಅವಿಭಾಜ್ಯ ಅಂಗವಾಗಿದ್ದು, ಕರ್ನಾಟಕದ ಜನರ ತ್ಯಾಗ ಮತ್ತು ಶೌರ್ಯದ ಸಂಕೇತಗಳಾಗಿವೆ.

**ಅಸಹಕಾರ ಚಳುವಳಿ:**

ಬಾಲ ಗಂಗಾಧರ ತಿಲಕ ಅವರ ನಿಧನದ ನಂತರ, ಮಹಾತ್ಮಾ ಗಾಂಧೀ ಅವರು ಶೀಘ್ರದಲ್ಲೇ ಕಾಂಗ್ರೆಸ್‌ನ ಏಕೈಕ ನಾಯಕರಾಗಿ ಹೊರಹೊಮ್ಮಿದರು. ಅವರು ಸ್ವಾತಂತ್ರ್ಯ ಚಳುವಳಿಯನ್ನು ಅಹಿಂಸೆ ಮತ್ತು ಸತ್ಯದ ತತ್ವಗಳ ಆಧಾರದ ಮೇಲೆ ಮುನ್ನಡೆಸಿದರು. 1920ರ ನವೆಂಬರ್‌ನಲ್ಲಿ ಅವರು ಶೌಕತ್ ಅಲಿ ಸಹೋದರರೊಂದಿಗೆ ಉತ್ತರ ಕರ್ನಾಟಕಕ್ಕೆ ಭೇಟಿ ನೀಡಿ ಕಾಂಗ್ರೆಸ್‌ನ ನೆಲೆಯನ್ನು ಬಲಪಡಿಸಲು ಮತ್ತು ಅಸಹಕಾರ ಚಳುವಳಿಯನ್ನು ಪ್ರಾರಂಭಿಸಲು ಪ್ರಯತ್ನಿಸಿದರು. 1920 ರಲ್ಲಿ ಧಾರವಾಡದಲ್ಲಿ ಮಾಜಿ ದಿವಾನರಾದ ವಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜಕೀಯ ಸಮ್ಮೇಳನ ನಡೆಯಿತು. ಈ ಸಭೆಯಲ್ಲಿ ಮುಂಬರುವ ನಾಗಪುರದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಕರ್ನಾಟಕದ ಅಧಿಕ ಸಂಖ್ಯೆಯ ಪ್ರತಿನಿಧಿಗಳನ್ನು ಕಳುಹಿಸಲು ನಿರ್ಧರಿಸಲಾಯಿತು. ಅಂತೆಯೇ 1920 ಡಿಸೆಂಬರ್‌ನಲ್ಲಿ ನಡೆದ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ 800 ಮಂದಿ ಕರ್ನಾಟಕದ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಅಧಿವೇಶನದಲ್ಲಿ ಕನ್ನಡ ಭಾಷೆ ಮಾತನಾಡುವ ಜನರಿಗಾಗಿ ಪ್ರತ್ಯೇಕ ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ರಚಿಸುವಂತೆ ಮನವಿ ಸಲ್ಲಿಸಲಾಯಿತು. ಇವರ ಮನವಿಗೆ ಸ್ಪಂದಿಸಿದ ರಾಷ್ಟ್ರೀಯ ಕಾಂಗ್ರೆಸ್ ಕರ್ನಾಟಕಕ್ಕೆ ಪ್ರತ್ಯೇಕ ಪ್ರದೇಶ ಕಾಂಗ್ರೆಸ್ ಸಮಿತಿ ರಚಿಸಲು ನಿರ್ಣಯ ಅಂಗೀಕರಿಸಿತು. ಈ ದಿಸೆಯಲ್ಲಿ 1921 'ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ (KPCC)' ಅಸ್ತಿತ್ವಕ್ಕೆ ಬಂದಿತು. 'ಕರ್ನಾಟಕ ಕೇಸರಿ' ಎಂಬ ಬಿರುದು ಪಡೆದಿದ್ದ ಗಂಗಾಧರರಾವ್ ದೇಶಪಾಂಡೆ ಕೆ.ಪಿ.ಸಿ.ಸಿ. ಯ ಪ್ರಥಮ ಅಧ್ಯಕ್ಷರಾದರು. ಗದಗದಲ್ಲಿ ಅದು ಕೇಂದ್ರ ಕಛೇರಿ ಹೊಂದಿತ್ತು.

ಗಾಂಧೀಜಿ ಧಾರವಾಡ, ಹುಬ್ಬಳ್ಳಿ ಮತ್ತು ಗದಗ ಪ್ರದೇಶಗಳಿಗೆ ಭೇಟಿ ನೀಡಿದ ಪರಿಣಾಮ ಅಹಿಂಸಾತ್ಮಕ ಸತ್ಯಾಗ್ರಹದ ಗಾಂಧೀಯ ಮಾರ್ಗವನ್ನು ಅನುಸರಿಸಲು ಅನುಕೂಲಕರವಾದ ವಾತಾವರಣ ನಿರ್ಮಾಣವಾಯಿತು. ಅವರ ಸರಳತೆ ಹಾಗೂ ಕೆಲಸದ ಮೇಲಿನ ನಿಷ್ಠೆ ಸಾಮಾನ್ಯ ಜನರನ್ನು ಆಕರ್ಷಿಸಿತು. ಖಿಲಾಫತ್ ಚಳುವಳಿಗೆ ಗಾಂಧೀಜಿ ನೀಡಿದ ಮುಕ್ತ ಬೆಂಬಲ ಜಿಲ್ಲೆಯಲ್ಲಿ ಭಾರೀ ಪ್ರತಿಕ್ರಿಯೆ ಪಡೆದಿತ್ತು. 1919ರ ಮಾರ್ಚ್ 26ರಂದು ಹುಬ್ಬಳ್ಳಿಯಲ್ಲಿ ಆಚರಿಸಲಾದ "ಖಿಲಾಫತ್ ದಿನ" ವನ್ನು ಹಿಂದೂಮುಸ್ಲಿಂ ಸಮುದಾಯದ 26 ಮಂದಿ ನಾಯಕರು ಸಹಿ ಹಾಕಿ ಆಚರಿಸಿದ್ದರೆಂದು ಕಂಡುಬರುತ್ತದೆ.

ವಿವಿಧ ವೃತ್ತಿಗಳಿಂದ ಬಂದ ಬದ್ಧತೆಯುಳ್ಳ ವ್ಯಕ್ತಿಗಳು ಈ ಚಳುವಳಿಗೆ ಬೆಂಬಲ ನೀಡಿ ಕಾಂಗ್ರೆಸ್‌ಗೆ ಸೇರಿದರು. ಅವರಲ್ಲಿ ಪ್ರಮುಖರಾದವರು ರಂಗನಾಥ್ ದಿವಾಕರ್, ಆರ್.ಎಸ್. ಹುಕ್ಕೇರಿಕಾರ, ಮಾಧವರಾವ್ ಕಬ್ಬೂರು ಹುಬ್ಬಳ್ಳಿಯಿಂದ – ಧಾರವಾಡ, ಭೀಮಪ್ಪ ತರ್ಲಾಪುರ, ರಾಮಚಂದ್ರಪ್ಪ ಕುಷ್ಟಗಿ ಗದಗದಿಂದ, ಎ.ಎನ್. ಕುಂದಾಪುರ. ಅಬ್ದುಲ್ ರಜಾಕ್ಸಾಬ್, ಮಲ್ಲಪ್ಪ ಅಕ್ಕಿ ಮತ್ತು ಶಾಮದ್ವಾನ್ ಪಠಾಣ ಹಾನಗಲ್ ನಿಂದ, ಶಂಕರಪ್ಪ

ತಾಂಡು, ಅಗ್ನಿಹೋತಿ ಹಾಗೂ ಗೋವಿಂದಾಚಾರ್ಯ ಹಾವೇರಿಯಿಂದ ಹಾಗೂ ನವಲಗುಂದ ತಾಲೂಕಿನ ಜೀವಪ್ಪ ಆನೆಗೊಂಡಿ ಇವರು ಪ್ರಮುಖರಾಗಿದ್ದರು.

ಗದಗದಲ್ಲಿ ಪ್ರಾಂತೀಯ ಕಾಂಗ್ರೆಸ್ ಕಚೇರಿಯ ಸ್ಥಾಪನೆಯು ಹೊಸ ಭರವಸೆಯನ್ನು ತಂದಿತು ಮತ್ತು ಅದೇ ಸಮಯದಲ್ಲಿ ಈ ಪ್ರದೇಶದಲ್ಲಿ ರಾಷ್ಟ್ರೀಯತಾವಾದಿ ಚಟುವಟಿಕೆಗಳನ್ನು ಸುಗಮಗೊಳಿಸುವ ಜವಾಬ್ದಾರಿಯನ್ನು ಸ್ಥಳೀಯ ಗಣ್ಯರ ಮೇಲೆ ಹೆಚ್ಚಿಸಿತು. ಅಸಹಕಾರ ಚಳುವಳಿ ನಡೆಸುವಂತೆ ಕಾಂಗ್ರೆಸ್ ಕೇಂದ್ರ ಸಮಿತಿಯು ನೀಡಿದ ಕರೆಗೆ ಸ್ಥಳೀಯರು ತಕ್ಷಣ ಮತ್ತು ಉತ್ಸಾಹದಿಂದ ಪ್ರತಿಕ್ರಿಯಿಸಿದರು. ಸರ್ಕಾರಿ ಕಚೇರಿಗಳು, ಶಾಲೆ ಮತ್ತು ಕಾಲೇಜುಗಳನ್ನು ಹೋರಾಟದ ಕಾರ್ಯಕ್ರಮಗಳ ಭಾಗವಾಗಿ ಬಹಿಷ್ಕರಿಸಲಾಯಿತು. ಆಲೂರು ವೆಂಕಟರಾವ್ ಮತ್ತು ಅವರ ಸಹಚರರು ನ್ಯಾಯಾಲಯವನ್ನು ಬಹಿಷ್ಕರಿಸಿದರು, ಗದಗದ ಅನಂತರಾವ್ ಜಲಿಹಾಲ್, ವಕೀಲ ವೃತ್ತಿಯನ್ನು ತ್ಯಜಿಸಿದರು ಮತ್ತು ನಾರಾಯಣರಾವ್ ಡಂಬಳ ತಮ್ಮ ಪೂರ್ಣ ಸಮಯವನ್ನು ಕಾಂಗ್ರೆಸ್ ಕೆಲಸಕ್ಕಾಗಿ ಮೀಸಲಿಟ್ಟರು. ಬಿ.ಆರ್. ಧಾರವಾಡದ ಪಟವರ್ಧನ್ ಸರ್ಕಾರಿ ವಕೀಲ ಕೆಲಸಕ್ಕೆ ರಾಜೀನಾಮೆ ನೀಡಿದರು. ರಂಗನಾಥ್ ದಿವಾಕರ್ ಬೋಧನಾ ವೃತ್ತಿಗೆ ರಾಜೀನಾಮೆ ನೀಡಿ ರಾಷ್ಟ್ರೀಯ ಸೇವೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟರು. ಪ್ರಸಿದ್ಧ ಹರಿಕೀರ್ತನಕಾರ ಹಾಗೂ ರೈಲ್ವೆ ನೌಕರನಾದ ಜಯಮಾಚಾರ್ಯ ವಡಪ್ಪಿ ಅವರು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿ ರಾಷ್ಟ್ರೀಯ ಸಂದೇಶವನ್ನು ಹರಡುವ ಕಾರ್ಯದಲ್ಲಿ ತೊಡಗಿದರು. ಲಾಲಾ ಲಜಪತ್ ರಾಯ್ ಅವರ ಶಿಷ್ಯ ಎನ್. ಎಸ್. ಹರ್ಡೇಕರ್ 1922 ರಲ್ಲಿ ಅಮೆರಿಕದಿಂದ ಹಿಂದಿರುಗಿ ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಸೇರಿದರು. ಅವರ ಪ್ರವೇಶವು ನಂತರದ ವರ್ಷಗಳಲ್ಲಿ ಈ ಪ್ರದೇಶದಲ್ಲಿ ಕಾಂಗ್ರೆಸ್ ಚಟುವಟಿಕೆಗಳನ್ನು ಸುಗಮಗೊಳಿಸಿತು.

ಜಿಲ್ಲಾಧಿಕಾರಿ ಮಿಸ್ಟರ್ ಪೇಂಟರ್ ಅವರು ಚಳುವಳಿಯನ್ನು ಕುಂಠಿತಗೊಳಿಸಲು ಕಠಿಣ ಕ್ರಮಗಳನ್ನು ಕೈಗೊಂಡರು. ಹುಬ್ಬಳ್ಳಿಯ ಮದ್ಯದಂಗಡಿ ಮುಂದೆ ಪಿಕೆಟಿಂಗ್ ನಡೆಸಿದ್ದಕ್ಕಾಗಿ ಇಬ್ಬರು ಖಿಲಾಫತ್ ಕಾರ್ಯಕರ್ತರನ್ನು ಬಂಧಿಸಿ ಆರು ತಿಂಗಳ ಜೈಲು ಶಿಕ್ಷೆ ವಿಧಿಸಲಾಯಿತು. ಇದರ ವಿರುದ್ಧವಾಗಿ 1921ರ ಜುಲೈ 1 ರಂದು ಖಿಲಾಫತ್ ಮೈದಾನದಲ್ಲಿ ಹರತಾಳ ಆಯೋಜಿಸಲಾಯಿತು. ತಿಲಕ ಸ್ವರಾಜ್ಯ ನಿಧಿ ಸಂಗ್ರಹಿಸಲು ಹಿಂದುಮುಸ್ಲಿಂ ಮುಖಂಡರ ಸಮ್ಮುಖದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಆ ಸಂದರ್ಭದಲ್ಲಿ ರಂಗನಾಥ ದಿವಾಕರ್ ಅವರು ಸಾರ್ವಜನಿಕರನ್ನು ಉದಾರವಾಗಿ ತಿಲಕ ಸ್ವರಾಜ್ಯ ನಿಧಿಗೆ ದೇಣಿಗೆ ನೀಡುವಂತೆ ಮನವಿ ಮಾಡಿದರು. ಜನರು ಆಭರಣಗಳು ಹಾಗೂ ರೂ.30,000 ಮೊತ್ತವನ್ನು ಈ ಪವಿತ್ರ ಉದ್ದೇಶಕ್ಕಾಗಿ ದೇಣಿಗೆಯಾಗಿ ನೀಡಿದರು.

ಆದರೆ ಅದೇ ದಿನ ಹುಬ್ಬಳ್ಳಿಯ ಮತ್ತೊಂದು ಸ್ಥಳದಲ್ಲಿ ದುರ್ಭಾಗ್ಯಕರ ಘಟನೆ ಸಂಭವಿಸಿತು. "ಪೋಲೀಸರು ಯಾವುದೇ ಎಚ್ಚರಿಕೆ ನೀಡದೆ ಮದ್ಯದಂಗಡಿ ಪಿಕೆಟಿಂಗ್ ವೀಕ್ಷಿಸುತ್ತಿದ್ದ ಸಾರ್ವಜನಿಕರ ಮೇಲೆ ಗುಂಡು ಹಾರಿಸಿದರು. ಈ ಅನಿರೀಕ್ಷಿತ ಗುಂಡಿನ ದಾಳಿಯಲ್ಲಿ ಖಿಲಾಫತ್ ಕಾರ್ಯಕರ್ತರಾದ ಮಲ್ಲಿಕಾಸಾಬ್ ಬಿನ್ ಖುರ್ದನಸಾಬ್, ಗೌಸಾಸಾಬ್ ಬಿನ್ ಖಾದರಸಾಬ್ ಮತ್ತು ಅಬ್ದುಲ್ ಖಾದರ್ ಚೌತ್ಯಾಯಿ ಸಾವಿಗೀಡಾದರೆ, 39 ಮಂದಿ ಗಾಯಗೊಂಡರು." ಪೋಲೀಸರು 27 ಮಂದಿ ಪ್ರಮುಖ ರಾಜಕೀಯ ನಾಯಕರು, ವಕೀಲರು ಹಾಗೂ ಪತ್ರಕರ್ತರ ವಿರುದ್ಧ ತಪ್ಪು ಆರೋಪಪತ್ರ ದಾಖಲಿಸಿದರು. ಇವರಲ್ಲಿ ರಂಗನಾಥ ದಿವಾಕರ್, ಮುದವಿಡು ಕೃಷ್ಣರಾವ್ ಸ್ಥಳದಲ್ಲೇ ಇರಲಿಲ್ಲ; ಗೋವಿಂದರಾವ್ ಗುಟ್ಟಾಲ್ ಅವರು 1921ರ ಜೂನ್ 14ರಂದು ಮದ್ಯದಂಗಡಿ ಪಿಕೆಟಿಂಗ್ ವೇಳೆ ಗಾಯಗೊಂಡು

ಚಿಕಿತ್ಸೆ ಪಡೆಯುತ್ತಿದ್ದರು. ಹೀಗಾಗಿ ಇವರ ಮೂವರನ್ನೂ ಬಿಡುಗಡೆಗೊಳಿಸಲಾಯಿತು. ಉಳಿದವರು 1 ರಿಂದ 2 ವರ್ಷಗಳ ಜೈಲು ಶಿಕ್ಷೆ ಅನುಭವಿಸಿದರು. ಇವರಲ್ಲಿ ಬಹುತೇಕರು ಹಿಂದು ಮತ್ತು ಮುಸ್ಲಿಂ ಸಮುದಾಯದವರಾಗಿದ್ದರು; ಘಟನೆಯಲ್ಲಿ ಕೆಲವು ಲಿಂಗಾಯತರು ಗಾಯಗೊಂಡಿದ್ದರೂ ಅವರಲ್ಲಿ ಯಾರನ್ನೂ ಬಂಧಿಸಲಿಲ್ಲ. "ಜನರನ್ನು ಭಯಭೀತಗೊಳಿಸಿ, ಮುಸ್ಲಿಂ ಮತ್ತು ಬ್ರಾಹ್ಮಣರನ್ನು ದೇಶದ್ರೋಹಿಗಳೆಂದು ಗುರುತಿಸಲು ಈ ಪ್ರಕರಣವನ್ನು ಉದ್ದೇಶಪೂರ್ವಕವಾಗಿ ದಾಖಲಿಸಲಾಯಿತು." ಈ ಹಿನ್ನೆಲೆಯಲ್ಲಿ ಪೊಲೀಸರು ಲಿಂಗಾಯತ ಸಮುದಾಯದ 19 ಮಂದಿಯನ್ನು ಸಾಕ್ಷಿಗಳೆಂದು ನಿಲ್ಲಿಸಿ ಪ್ರಮುಖ ಸಮುದಾಯಗಳ ನಡುವೆ ಭಿನ್ನಾಭಿಪ್ರಾಯ ಹುಟ್ಟಿಸುವ ಪ್ರಯತ್ನ ಮಾಡಿದರು. ಆಡಳಿತವು ವೃದ್ಧರನ್ನು ಕೂಡ ಕಲ್ಲೆಸೆದರು ಮತ್ತು ದೋಚಿದರು ಎಂದು ಸುಳ್ಳು ಆರೋಪ ಮಾಡಿ ಕ್ಷಮಿಸಲಾರದ ನಡವಳಿಕೆಯನ್ನು ತೋರಿಸಿತು.

"ಬರೋಡಾ ಹೈಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿ ಅಬ್ಬಾಸ್ ತ್ಯಾಬ್ಜಿ, ಮೈಸೂರು ಹೈಕೋರ್ಟ್‌ನ ನ್ಯಾಯಮೂರ್ತಿ ಎಸ್. ಎಸ್. ಸೆಟ್ಲೂರು ಹಾಗೂ ನಾಗಪುರದ ವಕೀಲ ಭವನೀಶಂಕರ ನಿಯೋಗಿ ಅವರು 1921ರ ಆಗಸ್ಟ್ 16ರಂದು ಧಾರವಾಡಕ್ಕೆ ಬಂದು ತನಿಖೆ ನಡೆಸಿದರು. ಜಿಲ್ಲಾ ಆಡಳಿತಕ್ಕೆ ಪೂರ್ವಭಾವಿ ಮಾಹಿತಿ ನೀಡಲಾಗಿದ್ದರೂ ಯಾರೂ ಹಾಜರಾಗಲಿಲ್ಲ ಮತ್ತು ಯಾವುದೇ ಮಾಹಿತಿಯನ್ನೂ ಒದಗಿಸಲಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಯಿತು. ಜಿಲ್ಲಾ ಆಡಳಿತವು ನಿರಪರಾಧಿಗಳನ್ನು ಅನ್ಯಾಯವಾಗಿ ಬಂಧಿಸಿತ್ತು; ಪಿಕೆಟಿಂಗ್ ವೇಳೆ ಯಾವುದೇ ತುರ್ತು ಪರಿಸ್ಥಿತಿ ಉಂಟಾಗದಿದ್ದರೂ ಗುಂಡಿನ ದಾಳಿ ಮತ್ತು ಲಾಠಿಚಾರ್ಜ್ ಸಂಪೂರ್ಣ ಅನ್ಯಾಯಕರ ಹಾಗೂ ಅನಗತ್ಯವಾಗಿತ್ತು."

ಚೌರಿ ಚೌರಾ ಘಟನೆಯಲ್ಲಿ ಸಂಭವಿಸಿದ ಹಿಂಸಾತ್ಮಕ ಘಟನೆ ಹಿನ್ನೆಲೆಗಾಗಿಯೇ ಗಾಂಧೀಜಿ 1922ರ ಫೆಬ್ರವರಿ 22ರಂದು ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡರು. ಇದರ ಪರಿಣಾಮವಾಗಿ ಹೋರಾಟಮುಖಿ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಲಾಯಿತು, ಆದರೆ ರಚನಾತ್ಮಕ ಕಾರ್ಯಕ್ರಮಗಳು ಅಡ್ಡಿಯಿಲ್ಲದೆ ಮುಂದುವರಿದವು ಗ್ರಾಮಮಟ್ಟದ ಜನರಿಗೆ ತಲುಪುವ ಉದ್ದೇಶದಿಂದ.

ನಾಯಕರು ಮತ್ತು ಸ್ವಯಂಸೇವಕರು ವ್ಯಾಪಕವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸಿ ಮನೆಮನೆಗೆ ತೆರಳಿ ಖಾದಿಯ ಪರಿಕಲ್ಪನೆಯನ್ನು ಜನಪ್ರಿಯಗೊಳಿಸಿದರು. ವಡಪ್ಪಿ ಜಯರಾಮಾಚಾರ್ಯ ಮತ್ತು ಅವರ ಶಿಷ್ಯ ಕಳ್ಳಿ ತಿಪ್ಪಣ್ಣರ ಭಕ್ತಿಗೀತೆಗಳು ಹಾಗೂ ಕೀರ್ತನೆಗಳು ಸ್ವದೇಶಿ ಮತ್ತು ಖಾದಿಯ ತತ್ವವನ್ನು ಜನಮನಗಳಲ್ಲಿ ಬೇರೂರಿಸಿದವು.

**ಕರ್ನಾಟಕದಲ್ಲಿನ ಅಸಹಕಾರ ಚಳುವಳಿಯ ಕೇಂದ್ರಗಳು:**

ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಬಾಗಲಕೋಟೆ, ಶಿರಸಿ, ಗದಗ, ಸಿದ್ದಾಪುರ, ಅಂಕೋಲ ಇತ್ಯಾದಿಗಳು ಅಸಹಕಾರ ಚಳುವಳಿಯ ಕೇಂದ್ರಗಳಾಗಿದ್ದವು.

**ಕರ್ನಾಟಕದಲ್ಲಿನ ಅಸಹಕಾರ ಚಟುವಟಿಕೆಗಳ ಪರಿಣಾಮಗಳು:**

1. ರಾಷ್ಟ್ರೀಯ ಜಾಗೃತಿಯ ವೃದ್ಧಿ: ಜನರಲ್ಲಿ ಸ್ವಾತಂತ್ರ್ಯದ ಹೋರಾಟದ ಅರಿವು ಹೆಚ್ಚಾಯಿತು. ಕರ್ನಾಟಕದ ಹಳ್ಳಿಗಳವರೆಗೂ ರಾಷ್ಟ್ರೀಯ ಚಿಂತನೆಗಳು ಹರಡಿದವು. ಭಾರತೀಯರ ಮನಸ್ಸಿನಲ್ಲಿ ಬ್ರಿಟಿಷ್ ಆಡಳಿತದ ವಿರುದ್ಧ ಅಸಹಕಾರ ಮನೋಭಾವ ಬೆಳೆದಿತು.
2. ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ: ಸರ್ಕಾರದ ಶಾಲೆಗಳಿಂದ ಅನೇಕ ವಿದ್ಯಾರ್ಥಿಗಳು

ನಿರ್ಗಮಿಸಿ ರಾಷ್ಟ್ರೀಯ ಶಾಲೆಗಳಲ್ಲಿ ಸೇರಿದರು. ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ಮೈಸೂರು ಮುಂತಾದ ಪ್ರದೇಶಗಳಲ್ಲಿ ರಾಷ್ಟ್ರೀಯ ಶಾಲೆಗಳು ಮತ್ತು ಕಾಲೇಜುಗಳು ಆರಂಭವಾದವು. ರಾಷ್ಟ್ರಪ್ರೇಮದ ಶಿಕ್ಷಣಕ್ಕೆ ಒತ್ತು ನೀಡಲಾಯಿತು.

3. ಸಾಮಾಜಿಕ ಪರಿವರ್ತನೆ: ಅಸ್ಪೃಶ್ಯತೆ ನಿರ್ಮೂಲನೆ, ಮದ್ಯನಿಷೇಧ, ಖಾದಿ ಪ್ರಚಾರ, ಹಾಗೂ ಸ್ವದೇಶಿ ಉಪಕ್ರಮಗಳು ಸಕ್ರಿಯಗೊಂಡವು. ಖಾದಿ ನೇಯಲು ಚರಕಗಳು ಪ್ರಚಾರಗೊಂಡು ಜನರಲ್ಲಿ ಸ್ವಾವಲಂಬನೆಯ ಭಾವನೆ ಬಿತ್ತಿತು.
4. ಮಹಿಳೆಯರ ಭಾಗವಹಿಸುವಿಕೆ: ಮಹಿಳೆಯರು ಮೊದಲ ಬಾರಿಗೆ ಸಾರ್ವಜನಿಕ ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಂಡರು. ನಾಗಮ್ಮ ಪಾಟೀಲ, ಸಿದ್ಧಮತಿ ಮೈಲಾರ ಮೊದಲಾದವರು ಪ್ರಚಾರ ಮತ್ತು ಸಭೆಗಳಲ್ಲಿ ಸಕ್ರಿಯ ಪಾತ್ರ ವಹಿಸಿದರು.
5. ಆರ್ಥಿಕ ಪರಿಣಾಮ: ವಿದೇಶಿ ವಸ್ತುಗಳ ಬಹಿಷ್ಕಾರದಿಂದ ಸ್ಥಳೀಯ ಕೈಗಾರಿಕೆಗಳಿಗೆ ಪ್ರೋತ್ಸಾಹ ದೊರಕಿತು. ಖಾದಿ ಹಾಗೂ ಹಸ್ತಕಲಾ ವಸ್ತುಗಳಿಗೆ ಬೇಡಿಕೆ ಹೆಚ್ಚಾಯಿತು.
6. ರಾಜಕೀಯ ಫಲಿತಾಂಶ: ಕಾಂಗ್ರೆಸ್ ಪಕ್ಷದ ಪ್ರಭಾವ ರಾಜ್ಯದಾದ್ಯಂತ ಹೆಚ್ಚಿತು. ಅನೇಕ ಹೊಸ ಮುಖಗಳು ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿದವು – ಗಂಗಾಧರ ರಾವ್ ದೇಶಪಾಂಡೆ, ಎಸ್. ನಂಜುಂಡಯ್ಯ, ಹನುಮಂತಪ್ಪ, ಮುಂತಾದವರು. ಜನರಲ್ಲಿ ಸ್ವರಾಜ್ಯದ ಆಶಯ ಗಟ್ಟಿಯಾಗಿ ನೆಲೆಗೊಂಡಿತು.
7. ಚಳುವಳಿಯ ಹಿಂಪಡೆಯ ಪರಿಣಾಮ: 1922ರ ಚೌರಿ ಚೌರಾ ಘಟನೆಯ ನಂತರ ಗಾಂಧೀಜಿಯವರು ಚಳುವಳಿಯನ್ನು ಹಿಂತೆಗೆದುಕೊಂಡರು. ಇದರಿಂದ ಸ್ವಲ್ಪ ನಿರಾಸೆ ಉಂಟಾದರೂ, ಜನರ ರಾಷ್ಟ್ರೀಯ ಭಾವನೆ ಕುಂದಲಿಲ್ಲ. ಮುಂದಿನ ನಾಗರಿಕ ಕಾನೂನು ಭಂಗ ಚಳುವಳಿಗೆ ಇದರ ಬುನಾದಿ ಬಲವಾಗಿ ರೂಪುಗೊಂಡಿತು.
8. ಧಾರವಾಡದಲ್ಲಿ ಮದ್ಯಪಾನದ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಲಾಯಿತು. ಈ ಸಮಯದಲ್ಲಿ ಪೊಲೀಸರು ಹಾರಿಸಿದ ಗುಂಡಿಗೆ ಮೂರು ಜನ ಬಲಿಯಾದರು.
9. ನವಲಗುಂದದಲ್ಲಿ ಭಾಷಣ ಮಾಡುತ್ತಿದ್ದ ಗಂಗಾಧರರಾವ್ ದೇಶಪಾಂಡೆಯವರನ್ನು ಬಂಧಿಸಲಾಯಿತು.
10. 'ಕರ್ನಾಟಕ ವೈಭವ' ಪತ್ರಿಕೆಯ ಸಂಪಾದಕ ಹನುಮಂತರಾವ್ ಮೊಹರೆಯವರನ್ನು ರಾಜದ್ರೋಹಿ ಬರಹಗಳಿಗಾಗಿ ಬಂಧಿಸಲಾಯಿತು.
11. ಉತ್ತರ ಕನ್ನಡ ಜಿಲ್ಲೆಯ ಚೌಡನಾಯಕ ಎಂಬ ರೈತನು ಮೊದಲ ರಾಜಕೀಯ ಬಂಧಿಯಾದನು. ಕರ್ನಾಟಕದ ಸುಮಾರು 70 ಜನರು ಸೆರೆಮನೆವಾಸ ಅನುಭವಿಸಿದರು.

**ಅಸಹಕಾರ ಚಳುವಳಿಯ ಪ್ರಾಮುಖ್ಯತೆ:**

1. ಅಸಹಕಾರ ಚಳುವಳಿಯಿಂದಾಗಿ ಜನರಲ್ಲಿ ಏಕತೆಯ ಮನೋಭಾವನೆಯನ್ನು ಮೂಡಿಸಿ ಒಗ್ಗೂಡುವಂತೆ ಮಾಡಿತು.
2. ಇದು ಎಲ್ಲಾ ಜನರನ್ನು ಹೋರಾಟಕ್ಕೆ ಧುಮುಕುವಂತೆ ಮಾಡಿತು.
3. ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿದ್ದರಿಂದ ದೇಶಿಯ ವಸ್ತುಗಳಿಗೆ ಬೇಡಿಕೆ ಹೆಚ್ಚಾಗಿ ಅವುಗಳ ಪ್ರಾಮುಖ್ಯತೆಯು ಹೆಚ್ಚಾಗತೊಡಗಿತು.
4. ಭಾರತದ ಸ್ವಾತಂತ್ರ್ಯ ಕುರಿತಾಗಿ ಎಲ್ಲರನ್ನು ಸಿದ್ಧತೆಗೊಳಿಸುವಂತೆ ಮಾಡಿತು.

5. ಸರ್ಕಾರಿ ಶಾಲೆಗಳನ್ನು ಬಹಿಷ್ಕರಿಸಿದ್ದರಿಂದ ಅನೇಕ ದೇಶಿಯ ವಿದ್ಯಾ ಸಂಸ್ಥೆಯ ಸ್ಥಾಪನೆಗೆ ಕಾರಣವಾಯಿತು.
6. ಹಿಂದೂ ಮುಸ್ಲಿಂರಲ್ಲಿ ಐಕ್ಯತೆಯ ಭಾವನೆಯನ್ನು ಮೂಡಿಸಿತು.
7. ಇದು ಕನ್ನಡ ನಾಡಿನ ಕೆಲವು ಪ್ರಮುಖ ನಾಯಕರು ಬೆಳಕಿಗೆ ಬಂದರು
8. ಕಾರ್ಮಿಕರ ಸಂಘಟನೆಗೆ ಬಲವನ್ನು ತಂದು ಕೊಟ್ಟಿತು.
9. ದೇಶೀಯ ವಸ್ತ್ರವಾದ ಖಾದಿಗೆ ಮಹತ್ವ ಬಂದಿತು.

**ಕಾನೂನು ಭಂಗ ಚಳುವಳಿ:**

1930ರಲ್ಲಿ ಗಾಂಧೀಜಿ ಆರಂಭಿಸಿದ ಕಾನೂನು ಭಂಗ ಚಳುವಳಿಯಿಂದ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಗೆ ಹೊಸತಿರುವು ಬಂದಿತು. ಈ ಚಳುವಳಿಯಲ್ಲಿ ಕರ್ನಾಟಕದ ಜನರು ಭಾಗವಹಿಸಿದರು. ಹೀಗಾಗಿ ಕರ್ನಾಟಕ ರಾಜ್ಯವನ್ನು “ಗಾಂಧಿ ಪ್ರಾಂತ್ಯ” ಎಂದು ಕರೆಯಲಾಗುತ್ತಿತ್ತು. ನಂತರ, ಬಾಂಬೆಯಲ್ಲಿ ಬ್ರಿಟಿಷ್ ರಾಜ್ಯಪಾಲರು ತಮ್ಮ ವರದಿಯನ್ನು ಈ ರೀತಿ ಸಲ್ಲಿಸಿದರು, ”ಕರ್ನಾಟಕವು ಗುಜರಾತಿಗಿಂತ ತನ್ನ ಚಳುವಳಿಯಲ್ಲಿ ಮುಂದಿದೆ ಎಂದು ಹೇಳಿದರು.” ಇಡೀ ದೇಶದಲ್ಲಿ ಬಂಧಿಸಲ್ಪಟ್ಟ ಮೊದಲ ವ್ಯಕ್ತಿ ದಂಡಿ ಸತ್ಯಾಗ್ರಹಿಯಾದ ದೇಶಪಾಂಡೆ ಗಂಗಾಧರರಾವ್.

“ಕಾರವಾರ ಜಿಲ್ಲೆಯ ಅಂಕೋಲಾ, ಶಿರಸಿ ಮತ್ತು ಸಿದ್ದಾಪುರ ತಾಲೂಕುಗಳಲ್ಲಿ ಆರ್.ಆರ್. ದಿವಾಕರ್, ಡಿ.ಪಿ. ಕರಮರ್ಕರ್ ಮತ್ತು ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲೂಕಿನ ವೀರನಗೌಡ ಪಾಟೀಲ್ ನೇತೃತ್ವದಲ್ಲಿ ತೆರಿಗೆ ರಹಿತ ಚಳುವಳಿಯನ್ನು ನಡೆಸಲಾಯಿತು. ದೇಶದ ಇತರ ಭಾಗಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಈ ಚಳುವಳಿ ಹೆಚ್ಚು ವೇಗವಾಗಿ ಹರಡಿತು. ಈ ಚಳುವಳಿಯಲ್ಲಿ ಕರ್ನಾಟಕದ ಸುಮಾರು 3000 ಜನರು ಜೈಲಿನಲ್ಲಿದ್ದರು.”

**ಅಂಕೋಲಾ ಉಪ್ಪಿನ ಸತ್ಯಾಗ್ರಹ:**

ಭಾರತದಲ್ಲಿ ಬ್ರಿಟಿಷ ಆಡಳಿತದ ವೇಳೆಯಲ್ಲಿ ಉಪ್ಪಿನ ಮೇಲೆ ವಿಧಿಸಲಾದ ತೆರಿಗೆಯನ್ನು ವಿರೋಧಿಸಿ “ಮಹಾತ್ಮಾ ಗಾಂಧೀಜಿಯವರು ಬ್ರಿಟಿಷರು ವಿಧಿಸಿದ ಉಪ್ಪಿನ ತೆರಿಗೆಯನ್ನು ವಿರೋಧಿಸಿ ದಂಡಿ ಎಂಬಲ್ಲಿ ಉಪ್ಪಿನ ಸತ್ಯಾಗ್ರಹ ಅಥವಾ ದಂಡಿಯಾತ್ರೆ ಪ್ರಾರಂಭಿಸಿದರು. ಹಾಗೆಯೇ ಕರ್ನಾಟಕದಲ್ಲಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲ ಕರ್ನಾಟಕದ ಉಪ್ಪಿನ ಸತ್ಯಾಗ್ರಹ ಕೇಂದ್ರವಾಗಿತ್ತು. ದಂಡಿ ಯಾತ್ರೆಯಿಂದ ಹಿಂದಿರುಗಿದ ಮೇಲೆ ಮೈಲಾರ ಮಹಾದೇವಪ್ಪ ಕರ್ನಾಟಕದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದರು.

ಎಐಸಿಸಿ ನಿರ್ಣಯಗಳ ಪ್ರಕಾರ, ಧಾರವಾಡ ಜಿಲ್ಲೆಯಲ್ಲಿ ನಾಗರಿಕ ಅಸಹಕಾರ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಜನವರಿ 26 ರಂದು ಸರ್ಕಾರಿ ಆವರಣಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಆಯ್ದ ಕೇಂದ್ರಗಳಲ್ಲಿ ಉಪ್ಪಿನ ಕಾನೂನನ್ನು ಧಿಕ್ಕರಿಸಿ ರಾಷ್ಟ್ರಧ್ವಜವನ್ನು ಹಾರಿಸಲು ಎನ್.ಎಸ್. ಹರ್ಡಿಕರ್ ಹಿಂದೂಸ್ತಾನಿ ಸೇವಾ ದಳ ಸ್ವಯಂಸೇವಕರ ಗುಂಪನ್ನು ಆಯೋಜಿಸಿದ್ದರು.

**ಉಪ್ಪಿನ ಸತ್ಯಾಗ್ರಹದ ಪ್ರಾರಂಭ:**

ಗಾಂಧೀಜಿಯ ಉಪ್ಪಿನ ಸತ್ಯಾಗ್ರಹದಿಂದ ಸ್ಫೂರ್ತಿಗೊಂಡ ಕರ್ನಾಟಕದ ಕಾಂಗ್ರೆಸ್ ಮುಖಂಡರು ಸ್ವಯಂ ಸೇವಕರು ಮತ್ತು ಸತ್ಯಾಗ್ರಹಿಗಳು 1930ರ ಏಪ್ರಿಲ್ 13 ರಂದು ಎಂ.ಪಿ.

ನಾಡಕರ್ಣಿಯವರ ನೇತೃತ್ವದಲ್ಲಿ ಅಂಕೋಲದಲ್ಲಿ ಉಪ್ಪಿನ ಸತ್ಯಾಗ್ರಹ ಆಚರಿಸಿದರು.

**ಕರ್ನಾಟಕ ಉಪ್ಪಿನ ಸತ್ಯಾಗ್ರಹ ಚಳುವಳಿಯ ಪ್ರಮುಖ ನಾಯಕರು:**

ಇವರಲ್ಲಿ ಎನ್. ಎಸ್. ಹರ್ಡಿಕರ್, ಆರ್.ಆರ್. ದಿವಾಕರ್, ಕರಮರ್ಕರ್ ಮೊದಲಾದ ಮುಖಂಡರು ಮತ್ತು 40,000 ಜನ ಸ್ವಯಂಸೇವಕರು ಭಾಗವಹಿಸಿದ್ದರು. ಈ ಉಪ್ಪಿನ ಸತ್ಯಾಗ್ರಹದಿಂದ ಜನತೆಯಲ್ಲಿ ಮಡುಗಟ್ಟಿ ನಿಂತಿದ್ದ ರಾಷ್ಟ್ರ ಪ್ರೇಮ ಉಕ್ಕಿ ಹರಿಯಿತು. ಅಂಕೋಲಕ್ಕೆ 'ಎರಡನೆಯ ಬಾರ್ಡೋಲಿ' ಎಂಬ ಹೆಸರು ಬಂದಿತು, ಈ ಸತ್ಯಾಗ್ರಹ 45 ದಿನಗಳ ಕಾಲ ನಡೆಯಿತು.

**ಕರ್ನಾಟಕ ಉಪ್ಪಿನ ಸತ್ಯಾಗ್ರಹ ಚಳುವಳಿಯ ಪ್ರಮುಖ ಸ್ಥಳಗಳು:**

ಕರ್ನಾಟಕದ ಕರಾವಳಿ ತೀರದ ಮಂಗಳೂರು, ಮಲ್ಪೆ, ಕುಂದಾಪುರ, ಉಡುಪಿ, ಕಾರ್ಕಳ, ಪುತ್ತೂರು, ಬಸನಾಳ (ಬಿಜಾಪುರ) ಯಾವಗಲ್, ಮುಂತಾದ 30 ಸ್ಥಳಗಳಲ್ಲಿ ಉಪ್ಪಿನ ಸತ್ಯಾಗ್ರಹ ನಡೆಯಿತು.

**ಕರ್ನಾಟಕ ಉಪ್ಪಿನ ಸತ್ಯಾಗ್ರಹ ಚಳುವಳಿಯಲ್ಲಿನ ಚಟುವಟಿಕೆಗಳು:**

1. ಕರ್ನಾಡ್ ಸದಾಶಿವರಾವ್, ರಾಮಕೃಷ್ಣ ಕಾರಂತ, ಮುಂತಾದವರು ಮಂಗಳೂರಿನಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸಿದರು.
2. ಕೆಲವು ಸತ್ಯಾಗ್ರಹಗಳು ಅಬಕಾರಿ ನಿಯಮವನ್ನು ಉಲ್ಲಂಘಿಸಿ ಗೋವಾದಿಂದ ಉಪ್ಪನ್ನು ತಂದು ಕಾರವಾರದಲ್ಲಿ ಮಾರಾಟ ಮಾಡಿದರು.
3. 1930 ರ ಜೂನ್ 1 ರಂದು ಸತ್ಯಾಗ್ರಹಿಗಳು 'ಸಾಣಿಕಟ್ಟೆ'ಯಲ್ಲಿದ್ದ ಉಪ್ಪಿನ ಸಂಗ್ರಹಗಾರ (ಗೋದಾಮು) ದ ಮೇಲೆ ದಾಳಿ ಮಾಡಿ ಬಂಧಿತರಾದರು.
4. ಅಂಕೋಲದಲ್ಲಿ ಉಪ್ಪಿನ ಸಂತೆಗಳನ್ನು ನಡೆಸಿ ಸುಂಕ ರಹಿತವಾಗಿ ಸಾವಿರಾರು ಚೀಲ ಉಪ್ಪು ಮಾರಲಾಯಿತು. ಜನರು ಅತ್ಯಂತ ಉತ್ಸಾಹದಿಂದ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.
5. ಪೊಲೀಸರು ಸತ್ಯಾಗ್ರಹಿಗಳನ್ನು ಚದುರಿಸಲು ಗೋಲಿಬಾರ್ ಮಾಡಿದರು ಹಲವರನ್ನು ಬಂಧಿಸಿದರು.

**ಕರ್ನಾಟಕ ಉಪ್ಪಿನ ಸತ್ಯಾಗ್ರಹ ಚಳುವಳಿಯ ಪರಿಣಾಮಗಳು:**

ಬ್ರಿಟಿಷರ ಉಪ್ಪಿನ ಮೇಲಿನ ತೆರಿಗೆ ವಿಧಿಸಿರುವುದನ್ನು ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಪ್ರತಿಭಟನೆಗೈದು ಕರ್ನಾಟಕದಲ್ಲೂ ಕೂಡ ಅನೇಕ ಸ್ವಾತಂತ್ರ್ಯ ಹೋರಾಟಗಾರರ ಪ್ರಯತ್ನದಿಂದ ಬ್ರಿಟಿಷರ ನೀತಿಯನ್ನು ವಿರೋಧಿಸಿ ಸ್ವತಃ ಉಪ್ಪನ್ನು ತಯಾರಿಸಿ ಉಚಿತವಾಗಿ ಹಂಚಿಕೆ ಮಾಡಿದರು. ಅದರ ಪರಿಣಾಮಗಳು ಇಂತಿವೆ.

1. ಸಾವಿರಾರು ಜನರು ಉಪ್ಪನ್ನು ತಯಾರಿಸಿದರು.
2. ಕಾನೂನು ಬಾಹಿರವಾಗಿ ಉಪ್ಪು ಖರೀದಿಸಿದರು.
3. ಬ್ರಿಟಿಷ್ ಸರಕುಗಳನ್ನು ವಿರೋಧಿಸಲಾಯಿತು.
4. ಗಫಾರಖಾನ ನೇತೃತ್ವದಲ್ಲಿ ಚಳುವಳಿ ಮಾಡಲಾಯಿತು.
5. ಗಾಂಧೀಜಿಯವರ ಬಂಧನವಾಯಿತು.

6. ಸಹಸ್ರಾರು ಜನರು ಬ್ರಿಟಿಷರ ವಿರುದ್ಧ ವಿರೋಧ ಮಾಡಿದರು.
7. ಗಾಂಧೀಜಿಯ ಬಿಡುಗಡೆ ಮಾಡಲಾಯಿತು.
8. ದಂಡಿ ಸತ್ಯಾಗ್ರಹ ಮಹತ್ವದ ಘಟನೆಯಾಯಿತು.
9. ಶಾಂತಿ, ನ್ಯಾಯದಿಂದ ಸ್ವಾತಂತ್ರ್ಯ ಹೋರಾಟ ಮಾಡಲಾಯಿತು.

1930 ರ ಏಪ್ರಿಲ್ 15 ರಂದು ಅಂಕೋಲಾದಿಂದ ಧಾರವಾಡಕ್ಕೆ ಸುಂಕ ರಹಿತ ಉಪ್ಪನ್ನು ಖರೀದಿಸಿದರು. ಇದನ್ನು ಸಾರ್ವಜನಿಕ ಸಭೆಯಲ್ಲಿ ಹರಾಜು ಮಾಡಲಾಯಿತು ಮತ್ತು ದಿವಾಕರ್ ಮತ್ತು ಕರಮರ್ಕರ್ ಕೂಡ ಈ ಸುಂಕ ರಹಿತ ಉಪ್ಪನ್ನು ಮಾರಾಟ ಮಾಡಿದರು ಮತ್ತು ಧಾರವಾಡದಲ್ಲಿ ಅವರನ್ನು ಬಂಧಿಸಲಾಯಿತು. ನವಲಗುಂದ ತಾಲ್ಲೂಕಿನ ರೈತರು ಗದಗ ಸ್ವಯಂಸೇವಕರ ಸಹಾಯದಿಂದ ಬೆನ್ನಿ ಹಳ್ಳ ಹೊಳೆಯಿಂದ ಉಪ್ಪನ್ನು ತಯಾರಿಸಿದರು, ಆದರೆ ಅವರು ಕಾನೂನನ್ನು ಉಲ್ಲಂಘಿಸಿದರೂ ಅವರಲ್ಲಿ ಯಾರನ್ನೂ ಬಂಧಿಸಲಾಗಿಲ್ಲ. ಹಾವೇರಿಯ ರಾಷ್ಟ್ರೀಯ ಚಳುವಳಿಯ ಮುಂಚೂಣಿಯಲ್ಲಿದ್ದ ಪರಮಣ್ಣ ಹೊಸಮನಿ ಅವರು ಲವಣಯುಕ್ತ ಮಣ್ಣು ತಂದು ಉಪ್ಪನ್ನು ತಯಾರಿಸಿ ಪಟ್ಟಣದಲ್ಲಿ ಮಾರಾಟ ಮಾಡಿದರು. ಅವರು ಅಂದಿನ ವಾತಾವರಣವನ್ನು ಈ ರೀತಿ ಉಲ್ಲೇಖಿಸುತ್ತಾರೆ: "ವಾತಾವರಣವು ತುಂಬಾ ಉದ್ವಿಗ್ನ ಮತ್ತು ಆವೇಶಭರಿತವಾಗಿತ್ತು, ಅದರಿಂದ ಪ್ರಭಾವಿತರಾದ ಹಲವಾರು ಬ್ರಾಹ್ಮಣೇತರ ನಾಯಕರು ಸ್ವಯಂಪ್ರೇರಣೆಯಿಂದ ಸತ್ಯಾಗ್ರಹಕ್ಕೆ ಸೇರಲು ಮುಂದೆ ಬಂದರು, ಅವರು ಅಲ್ಲಿಯವರೆಗೆ ಕಾಂಗ್ರೆಸ್ ಅನ್ನು ಬ್ರಾಹ್ಮಣ ಪಕ್ಷವಾಗಿ ವಿರೋಧಿಸುತ್ತಿದ್ದರು. ನನ್ನ ಸೋದರಸಂಬಂಧಿ ಸಿದ್ದಣ್ಣ ಹೊಸಮನಿ ಈ ಸಮಯದಲ್ಲಿ ಕಾಂಗ್ರೆಸ್ ಸೇರಿದರು".

**ಅರಣ್ಯ ಸತ್ಯಾಗ್ರಹ:**

ಉಪ್ಪಿನ ಸತ್ಯಾಗ್ರಹದ ನಂತರ ಮದ್ಯಪಾನ ವಿರೋಧಿ ಚಳುವಳಿಯನ್ನು ಹಮ್ಮಿಕೊಳ್ಳಲಾಯಿತು. ಇದರ ಅಂಗವಾಗಿ ಸರ್ಕಾರಿ ಜಮೀನಿನಲ್ಲಿ ಬೆಳೆದು ನಿಂತಿದ್ದ ಈಚಲು ಮರಗಳನ್ನು ಉರುಳಿಸುವ ಮೂಲಕ ಅರಣ್ಯ ಸತ್ಯಾಗ್ರಹವನ್ನು ನಡೆಸಲಾಯಿತು.

**ಉದ್ದೇಶಗಳು:**

ಈಚಲು ಮರಗಳನ್ನು ಕಡಿದು ಉರುಳಿಸುವ ಮೂಲಕ ಹೆಂಡ ಉತ್ಪಾದಿಸದಂತೆ ತಡೆಗಟ್ಟುವುದು.

ಕಾಯ್ದಿಟ್ಟ ಅರಣ್ಯಗಳಿಂದ ಉರುವಲು ಕಟ್ಟಿಗೆ ಹಾಗೂ ಹುಲ್ಲನ್ನು ತರುವುದು ಇತ್ಯಾದಿಗಳು.

**ಅರಣ್ಯ ಸತ್ಯಾಗ್ರಹ ಪ್ರಾರಂಭ:**

ಪ್ರಥಮವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಸತ್ಯಾಗ್ರಹ ಪ್ರಾರಂಭವಾಯಿತು, ಸರ್ಕಾರಿ ಅರಣ್ಯಗಳಲ್ಲಿ ಬೆಳೆದು ನಿಂತಿದ್ದ ಈಚಲು ಮರಗಳನ್ನು ಕಡಿದು ಉರುಳಿಸಲಾಯಿತು. ಇದೇ ರೀತಿ ಬೆಳಗಾವಿ, ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಬೆಲೆ ಬಾಳುವ ಮರಗಳನ್ನು ಕಡಿದು ಸರ್ಕಾರಕ್ಕೆ ಬರುವ ಆದಾಯವನ್ನು ತಪ್ಪಿಸಲಾಯಿತು. ಧಾರವಾಡದ ಶಿಗ್ಗಾವಿಯಲ್ಲಿ ಅರಣ್ಯ ಸತ್ಯಾಗ್ರಹ ಯಶಸ್ವಿಯಾಯಿತು.

**ನಾಯಕರು:**

ಕರನಿರಾಕರಣೆ ಚಳುವಳಿಯಲ್ಲಿ ಕರ್ನಾಡ್ ಸದಾಶಿವರಾಯರು ಮಹತ್ತರವಾದ

ಪಾತ್ರ ವಹಿಸಿದ್ದರು. ಎಸ್. ನಿಜಲಿಂಗಪ್ಪ, ಬಳ್ಳಾರಿ ಸಿದ್ದಮ್ಮ, ಕೃಷ್ಣಾರೆಡ್ಡಿ, ರಾಜಶೇಖರಯ್ಯ ಹಿರೇಮಠ.

ಈ ಚಳುವಳಿಯಲ್ಲಿ ಸಾರ್ವಜನಿಕರು ಸಹ ಕೊಡಲಿಯಿಂದ ಮರಗಳನ್ನು ಕಡಿಯಲು ಮುಂದಾದರು. ಅವರು ದೇಶಭಕ್ತಿ ಗೀತೆಗಳನ್ನು ಹಾಡಿದರು ಮತ್ತು ಉತ್ಸಾಹವನ್ನು ಹೆಚ್ಚಿಸಲು ಘೋಷಣೆಗಳನ್ನು ಕೂಗಿದರು. ಧಾರವಾಡ ಜಿಲ್ಲಾ ಗೆಜೆಟಿಯರ್ ಪ್ರಕಾರ, ಬಂಕಾಪುರ, ಶಿಗ್ಗಾಂವ್, ಹಾವೇರಿ, ಹಾನಗಲ್, ಹಿರೇಕೆರೂರ್, ಗದಗ, ಮುಳಗುಂದ ಪ್ರದೇಶಗಳಲ್ಲಿ ಮರಗಳನ್ನು ಕಡಿಯುವುದನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲಾಯಿತು. ಹತ್ತಾರು ಸಾವಿರ ಜನರು ಉತ್ಸಾಹದಿಂದ ಭಾಗವಹಿಸಿದರು ಆದರೆ ಕೆಲವರನ್ನು ಮಾತ್ರ ಬಂಧಿಸಲಾಯಿತು. ಈ ಅವಧಿಯಲ್ಲಿ ನಡೆದ "ಶಿರಸಿ ಅರಣ್ಯ ಸತ್ಯಾಗ್ರಹ"ದಲ್ಲಿ ಗದಗ ಸ್ವಯಂಸೇವಕರು ಭಾಗವಹಿಸಿದ್ದರು. ಶಿರಸಿ ಕಾಡಿನೊಳಗೆ ನುಗ್ಗಿದ ಸ್ಥಳೀಯ ನಿವಾಸಿ ಶ್ರೀನಿವಾಸ ಪೂಜಾರ್, ಶ್ರೀಗಂಧದ ಮರಗಳನ್ನು ಕತ್ತರಿಸಿ ಶಿರಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರು.

**ಮೈಸೂರು ಸಂಸ್ಥಾನದಲ್ಲಿ ಅರಣ್ಯ ಸತ್ಯಾಗ್ರಹ:**

ಮೈಸೂರು ಸಂಸ್ಥಾನದಲ್ಲಿ ಪ್ರಥಮವಾಗಿ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ತುರುವನೂರಿನಲ್ಲಿ ಅರಣ್ಯ ಸತ್ಯಾಗ್ರಹ ಆರಂಭವಾಯಿತು. ಈ ಸತ್ಯಾಗ್ರಹದ ಮೂಲಕ ಎಸ್. ನಿಜಲಿಂಗಪ್ಪನವರು ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಅವರು ಈಚಲು ಮರಗಳನ್ನು ಕಡಿದು ಉರುಳಿಸುವ ಮೂಲಕ ಬಂಧಿತರಾದರು. ಇವರಲ್ಲಿ ಬಳ್ಳಾರಿ ಸಿದ್ದಮ್ಮ, ಕೃಷ್ಣಾರೆಡ್ಡಿ, ರಾಜಶೇಖರಯ್ಯ ಹಿರೇಮಠ ಮೊದಲಾದ ಮುಖಂಡರು ಭಾಗವಹಿಸಿದ್ದರು.

**ಅರಣ್ಯ ಸತ್ಯಾಗ್ರಹ ಅಂತ್ಯ:**

ಗಾಂಧೀಜಿಯ ಸೂಚನೆಯ ಮೇರೆಗೆ ಈ ಚಳುವಳಿಯನ್ನು ನಿಲ್ಲಿಸಲಾಯಿತು.

**ಕರಾನಿರಾಕರಣೆ ಚಳುವಳಿ:**

ಗುಜರಾತಿನ "ಬಾರ್ಡೋಲಿ ಸತ್ಯಾಗ್ರಹದ ಮಾದರಿಯಲ್ಲಿ 1932 ರಲ್ಲಿ ಕರ್ನಾಟಕದಲ್ಲಿ 'ಕರಾನಿರಾಕರಣೆ' ಚಳುವಳಿಯನ್ನು ಆರಂಭಿಸಲಾಯಿತು.

**ಕರಾನಿರಾಕರಣೆ ಚಳುವಳಿ ಹಮ್ಮಿಕೊಂಡ ಪ್ರದೇಶಗಳು:**

ಕರಾನಿರಾಕರಣೆ ಚಳುವಳಿಯನ್ನು ಆರಂಭಿಸುವುದಕ್ಕಾಗಿ ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ, ಅಂಕೋಲ ಮತ್ತು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕುಗಳನ್ನು ಆಯ್ಕೆ ಮಾಡಲಾಯಿತು.

**ಕರಾನಿರಾಕರಣೆ ಚಳುವಳಿ ಚಟುವಟಿಕೆಗಳು:**

1. ಪಟೇಲರು ತಮ್ಮ ಪದವಿಗೆ ರಾಜೀನಾಮೆ ನೀಡಿದರು.
2. ಅಧಿಕಾರಿಗಳು ಕಂದಾಯ ವಸೂಲಿಗೆ ಬಂದರೆ ಅನ್ನ, ಆಹಾರ ಸಿಗದಂತೆ ಮಾಡಿದರು.
3. ರೈತರು ಕಂದಾಯ ಕೊಡಲು ನಿರಾಕರಿಸಿದರು.
4. ಅಧಿಕಾರಿಗಳು ರೈತರ ಮನೆಮಠಗಳನ್ನು ಜಪ್ತಿ ಮಾಡಿ ಹರಾಜು ಮಾಡಿದರು. ಅವುಗಳನ್ನು ಕೊಳ್ಳಲು ಮುಂದೆ ಬಂದ ಸರ್ಕಾರದ ಬೆಂಬಲಿಗರ ಮನೆಯ ಮುಂದೆ ಮಹಿಳೆಯರು ಧರಣಿ ನಡೆಸಿದರು.

**ಕರಾನಿರಾಕರಣೆ ಚಳುವಳಿ ನಾಯಕರು:**

ಆರ್.ಆರ್. ದಿವಾಕರ್, ಸರದಾರ ವೆಂಕಟ ರಾಮಯ್ಯ, ಕರಮರ್ಕರ್, ಎಂ.ಪಿ. ನಾಡಕರ್ಣಿ, ತಿಮ್ಮಪ್ಪ ನಾಯಕ್, ವೀರಣ್ಣಗೌಡ ಪಾಟೀಲ, ಕೆ. ಎಸ್. ಪಾಟೀಲ, ಹಳ್ಳಿಕೇರಿ ಗುದ್ಲಪ್ಪ, ಟಿ.ಆರ್. ನೆಸ್ವಿ, ನಾಗಮ್ಮ ಪಾಟೀಲ ಮುಂತಾದ ನಾಯಕರು ಭಾಗವಹಿಸಿದ್ದರು.

**ಕರ ನಿರಾಕರಣೆ ಚಳುವಳಿಯಲ್ಲಿ ಪತ್ರಿಕೆಗಳ ಪಾತ್ರ:**

ಕರ ನಿರಾಕರಣೆ ಚಳುವಳಿಯಲ್ಲಿ ಜನರನ್ನು ಪಾಲ್ಗೊಳ್ಳುವಂತೆ ಮಾಡಲು ಪತ್ರಿಕೆಗಳ ಪಾತ್ರ ಮಹತ್ವಪೂರ್ಣವಾಗಿದೆ. ಈ ಚಳುವಳಿಯಲ್ಲಿನ ಕರ್ನಾಟಕದ ಜನತೆಯನ್ನು ಭಾಗವಹಿಸಲು ಪ್ರೇರೇಪಣೆ ನೀಡಿದ ಪತ್ರಿಕೆಗಳೆಂದರೆ 'ಕರ್ನಾಟಕ ವೈಭವ', 'ಕನ್ನಡಿಗ', 'ಕರ್ನಾಟಕ ಕೇಸರಿ', 'ಕರ್ಮವೀರ', 'ನವಯುಗ', 'ಸತ್ಯಾಗ್ರಹಿ', 'ಕನ್ನಡ ವೃತ್ತ', 'ಕನ್ನಡ ಧುರೀಣ', 'ವಿಶ್ವ ಕರ್ನಾಟಕ', 'ವೀರ ಕೇಸರಿ', 'ತರುಣ ಕರ್ನಾಟಕ' ಇತ್ಯಾದಿಗಳಾಗಿವೆ. ಈ ಪತ್ರಿಕೆಗಳು ಕರ್ನಾಟಕದಲ್ಲಿನ ಬಿಜಾಪುರ, ಬಾಗಲಕೋಟೆ, ಬಳ್ಳಾರಿ, ಉಡುಪಿ, ಕುಮಟಾ, ಬೆಂಗಳೂರು, ಮುಂತಾದ ಕಡೆಗಳಲ್ಲಿ ಪ್ರಕಟವಾಗುತ್ತಿದ್ದವು. ಇದರಿಂದಾಗಿ ಈ ಪತ್ರಿಕೆಗಳ ಮೇಲೆ ಬ್ರಿಟಿಷ್ ಸರಕಾರವು ಅವುಗಳ ವಿರುದ್ಧ ಕಾನೂನಿನ ಕ್ರಮವನ್ನು ಕೈಗೊಂಡ ಪತ್ರಿಕೆಗಳಲ್ಲಿ ಇಂತಹ ವಿಷಯಗಳನ್ನು ಪ್ರಕಟಣೆ ಮಾಡುವುದನ್ನು ನಿಲ್ಲಿಸಿತು.

**ಪರಿಣಾಮಗಳು:**

1. ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ ಸುಟ್ಟು ಹಾಕಿದರು.
2. ಮುಂತಾದ ಕಡೆಗಳಲ್ಲಿ ನಗರ ಹರತಾಳ, ಉಪವಾಸ ಹಾಗೂ ಪ್ರತಿಭಟನಾ ಸಭೆಗಳನ್ನು ನಡೆಸಿದರು.
3. ರೈತರು ಕಂದಾಯ ಕೊಡಲು ನಿರಾಕರಿಸಿದರು.
4. ಮದ್ಯಪಾನ ವಿರೋಧಿ ಚಳುವಳಿ ನಡೆಸಿ ಈಚಲುಮರಗಳನ್ನು ಕಡಿದು ಉರುಳಿಸಲಾಯಿತು.
5. ವಿದೇಶಿ ವಸ್ತುಗಳನ್ನು ಬಹಿಷ್ಕರಿಸಲಾಯಿತು. ಪೊಲೀಸರು ಚಳುವಳಿಗಾರರ ಮೇಲೆ ಗೋಲಿಬಾರ್ ಮಾಡಿ ಹಲವರನ್ನು ಕೊಂದರು.
6. ಪತ್ರಿಕಾ ಸಂಪಾದಕರನ್ನು ಬಂಧಿಸಲಾಯಿತು. ಆದರೂ ಕನ್ನಡಿಗರು ಜಗ್ಗಲಿಲ್ಲ.

ತೆರಿಗೆ ರಹಿತ ಅಭಿಯಾನವು ಚಳುವಳಿಯ ಜನಪ್ರಿಯತೆಯನ್ನು ತೀವ್ರಗೊಳಿಸಿದ ಮತ್ತೊಂದು ವೈಶಿಷ್ಟ್ಯವಾಗಿತ್ತು. ಹಿರೇಕೆರೂರು ಮತ್ತು ಹಾವೇರಿ ಪ್ರದೇಶದಂತಹ ಪ್ರದೇಶಗಳಲ್ಲಿ ಇದನ್ನು ಯಶಸ್ವಿಯಾಗಿ ಪ್ರಾರಂಭಿಸಲಾಯಿತು. ವೀರನಗೌಡ ಪಾಟೀಲ್ ಅವರ ಅತ್ಯುತ್ತಮ ಸೇವೆ ಮತ್ತು ಉಸ್ತುವಾರಿಯಿಂದಾಗಿ ಸರದಾರ ಎಂಬ ಬಿರುದನ್ನು ಪಡೆದರು. ಜನವರಿ 26, 1931 ಮತ್ತು 1932 ರಲ್ಲಿ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ದೇಶಭಕ್ತರು ಪುರಸಭೆಗಳು, ಪಂಚಾಯತ್‌ಗಳು ಮತ್ತು ಸರ್ಕಾರಿ ಆವರಣದಲ್ಲಿ ಧ್ವಜಾರೋಹಣ ಸಮಾರಂಭವನ್ನು ನಡೆಸಿದರು, ಇದು ರಾಷ್ಟ್ರೀಯತಾವಾದಿ ಚಟುವಟಿಕೆಗಳ ವೇಗವನ್ನು ಹೆಚ್ಚಿಸಿತು. ಕಾರ್ಯಕರ್ತರ ವೀರ ಶೌರ್ಯವನ್ನು ಸ್ಥಳೀಯ ಪತ್ರಿಕೆಗಳು ಶ್ಲಾಘಿಸಿದವು. ಸ್ಥಳೀಯವಾಗಿ ರಾಷ್ಟ್ರೀಯತಾವಾದಿ ಉತ್ಸಾಹವನ್ನು ಹೆಚ್ಚಿಸಿದ ಗಣ್ಯರ ಪ್ರಯತ್ನವನ್ನು ಸಾರ್ವಜನಿಕರು ಶ್ಲಾಘಿಸಿದರು. ಈ ಪ್ರಕ್ರಿಯೆಯ ಸಮಯದಲ್ಲಿ ತೆಗೆದುಕೊಂಡ ಸಂಪೂರ್ಣ ಚಟುವಟಿಕೆಗಳು ರಾಷ್ಟ್ರೀಯ ಪತ್ರಿಕೆಗಳಲ್ಲಿ ಸಾಮಾನ್ಯ ಸುದ್ದಿ ಪ್ರಕಟಣೆಯೊಂದಿಗೆ ಬುಲೆಟಿನ್ ಪ್ರತಿಗಳ ರೂಪದಲ್ಲಿ

ವಿವಿಧ ಸ್ಥಳಗಳನ್ನು ತಲುಪಿದವು.

**ಫಲಿತಗಳು:**

1. ರಾಜಕೀಯ ಜಾಗೃತಿಯ ವೃದ್ಧಿ: ಈ ಚಳುವಳಿಗಳ ಮೂಲಕ ಸಾಮಾನ್ಯ ಜನರಲ್ಲಿ ರಾಷ್ಟ್ರಭಕ್ತಿ ಮತ್ತು ರಾಜಕೀಯ ಅರಿವು ಹೆಚ್ಚಾಯಿತು. ಮೊದಲು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸದ ಗ್ರಾಮೀಣ ಜನತೆ ಕೂಡ ಹೋರಾಟಕ್ಕೆ ಮುಂದಾದರು. ವಿದ್ಯಾರ್ಥಿಗಳು, ವಕೀಲರು, ಶಿಕ್ಷಕರು ಹಾಗೂ ರೈತರು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರವಹಿಸಿದರು.
2. ಹಲವಾರು ರಾಷ್ಟ್ರಭಕ್ತರ ಉದಯವಾಯಿತು: ಕರ್ನಾಟಕದಲ್ಲಿ ಮಹಾತ್ಮ ಗಾಂಧಿಯ ಅಹಿಂಸಾ, ಸತ್ಯಾಗ್ರಹ ತತ್ವಗಳ ಪ್ರಭಾವದಿಂದ ಹಲವಾರು ಸ್ಥಳೀಯ ನಾಯಕರು ಪ್ರೇರಿತರಾದರು. ಉದಾ: ಸರದಾರ ವೀರಣ್ಣಗೌಡ ಪಾಟೀಲ, ಕೌಜಲಗಿ ಹನುಮಂತರಾವ, ಹಳ್ಳಿಕೇರಿ ಗುದ್ಲೆಪ್ಪ, ತಗಡೂರು ರಾಮಚಂದ್ರರಾವ ಇತ್ಯಾದಿ. ಈ ಚಳುವಳಿಗಳಿಂದ ಹಲವಾರು ಯುವಕರು ದೇಶಸೇವೆಗೆ ತಮ್ಮ ಜೀವನವನ್ನು ಅರ್ಪಿಸಿದರು.
3. ಸಮಾಜದ ಸಂಘಟನಾಶಕ್ತಿ: ಚಳುವಳಿಯ ಸಮಯದಲ್ಲಿ ಖಾದಿ ಧರಿಸುವುದು, ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು, ಮದ್ಯಪಾನ ನಿಷೇಧ, ಹಾಗೂ ಸ್ವದೇಶಿ ವಸ್ತುಗಳ ಬಳಕೆ ಅಭಿಯಾನಗಳು ಗ್ರಾಮಾಂತರ ಪ್ರದೇಶಗಳಿಗೂ ವ್ಯಾಪಿಸಿದವು. ಮಹಿಳೆಯರು ಹಾಗೂ ವಿದ್ಯಾರ್ಥಿಗಳು ಸಂಘಟಿತವಾಗಿ ಭಾಗವಹಿಸಿದ ಪರಿಣಾಮ ಸಾಮಾಜಿಕ ಏಕತೆ ಹೆಚ್ಚಾಯಿತು.
4. ಅಸಹಕಾರ ಚಳುವಳಿಯಿಂದ ಶೈಕ್ಷಣಿಕ ಪರಿಣಾಮಗಳು ಉಂಟಾದವು: ಸರ್ಕಾರದ ಶಾಲೆಗಳ ಬದಲಿಗೆ ರಾಷ್ಟ್ರೀಯ ಶಾಲೆಗಳು ಸ್ಥಾಪಿಸಲ್ಪಟ್ಟವು (ಉದಾ: ಹುಬ್ಬಳ್ಳಿಯ ರಾಷ್ಟ್ರೀಯ ಶಾಲೆ, ಬೆಳಗಾವಿಯ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು). ಇದರಿಂದ ಸ್ವದೇಶಿ ಶಿಕ್ಷಣದ ಪ್ರೇರಣೆ ವೃದ್ಧಿಯಾಯಿತು.
5. ಕಾನೂನು ಭಂಗ ಚಳುವಳಿಯಿಂದ ಬಂದ ಸಾಮಾಜಿಕ ಪರಿವರ್ತನೆ: ಉಪ್ಪಿನ ಸತ್ಯಾಗ್ರಹ, ವಿದೇಶಿ ವಸ್ತುಗಳ ದಹನ, ತೆರಿಗೆ ವಿರೋಧ ಹೋರಾಟಗಳು ಮೊದಲಾದವು ಜನರ ಜೀವನದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತಂದವು. ಅಧಿಕಾರಿಗಳಿಗೆ ಅಹಿಂಸಾತ್ಮಕವಾಗಿ ಪ್ರತಿರೋಧ ನೀಡುವ ಧೈರ್ಯ ಜನರಲ್ಲಿ ಮೂಡಿತು.
6. ಮಹಿಳೆಯರ ಸಕ್ರಿಯ ಪಾತ್ರ: ಅಸಹಕಾರ ಮತ್ತು ಕಾನೂನು ಭಂಗ ಚಳುವಳಿಯು ಮಹಿಳೆಯರನ್ನು ಸಾರ್ವಜನಿಕ ಜೀವನಕ್ಕೆ ತಂದು ರಾಷ್ಟ್ರೀಯ ಹೋರಾಟದ ನಾಯಕರನ್ನಾಗಿ ರೂಪಿಸಿತು. ಉದಾ: ನಾಗಮ್ಮ ಪಾಟೀಲ, ಸಿದ್ಧಮತಿ ಮೈಲಾರ ಮುಂತಾದವರು.
7. ಸ್ವಾತಂತ್ರ್ಯ ಚಿಂತನೆಗೆ ಬಿತ್ತನೆ: ಈ ಚಳುವಳಿಗಳಿಂದ ಕರ್ನಾಟಕದ ಜನರಲ್ಲಿ ಸ್ವರಾಜ್ಯದ ಆಶಯ ಬೇರೂರಿತು. ನಂತರದ ವೈಯಕ್ತಿಕ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿಗೆ (1942) ಗೆ ಬಲವಾದ ನೆಲೆಯಾಯಿತು.

**ಉಪಸಂಹಾರ:**

ಕರ್ನಾಟಕದ ಅಸಹಕಾರ ಮತ್ತು ಕಾನೂನು ಭಂಗ ಚಳುವಳಿಗಳು ಭಾರತದ ರಾಷ್ಟ್ರೀಯ ಚಳುವಳಿಯ ಅವಿಭಾಜ್ಯ ಭಾಗವಾಗಿದ್ದವು. ಈ ಎರಡೂ ಚಳುವಳಿಗಳ ಮೂಲಕ

ಕರ್ನಾಟಕದ ಜನತೆ ಬ್ರಿಟಿಷ್ ಆಡಳಿತದ ವಿರುದ್ಧ ಧೈರ್ಯವಾಗಿ ನಿಂತು, ಸ್ವಾತಂತ್ರ್ಯದ ಹೋರಾಟದಲ್ಲಿ ಸಕ್ರಿಯ ಪಾತ್ರವಹಿಸಿದರು. ಮಹಾತ್ಮ ಗಾಂಧಿಯ ಸತ್ಯಾಗ್ರಹ, ಅಹಿಂಸಾ ಮತ್ತು ಸ್ವದೇಶಿ ತತ್ವಗಳ ಪ್ರಭಾವದಿಂದ ರಾಜ್ಯದ ಜನರಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿತು.

ಅಸಹಕಾರ ಚಳುವಳಿಯು ಜನರಲ್ಲಿ ರಾಜಕೀಯ ಅರಿವು ಹಾಗೂ ಸ್ವಾಭಿಮಾನವನ್ನು ಬೆಳೆಸಿದರೆ, ಕಾನೂನು ಭಂಗ ಚಳುವಳಿಯು ಅದನ್ನು ಕ್ರಿಯಾತ್ಮಕ ಹೋರಾಟದ ರೂಪಕ್ಕೆ ತಂದಿತು. ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಮಹಿಳೆಯರು ಮುಂತಾದ ಎಲ್ಲಾ ವರ್ಗದ ಜನರು ರಾಷ್ಟ್ರಸೇವೆಗೆ ತೊಡಗಿಕೊಂಡರು. ಖಾದಿ ಬಳಕೆ, ವಿದೇಶಿ ವಸ್ತುಗಳ ಬಹಿಷ್ಕಾರ, ತೆರಿಗೆ ವಿರೋಧ ಚಟುವಟಿಕೆಗಳು ಜನರ ಜೀವನದಲ್ಲಿ ಹೊಸ ಚೇತನವನ್ನು ತಂದವು. ಈ ಚಳುವಳಿಗಳು ಕರ್ನಾಟಕದ ಸಮಾಜದಲ್ಲಿ ಏಕತೆ, ಸಂಘಟನಾ ಶಕ್ತಿ ಮತ್ತು ದೇಶಭಕ್ತಿಯನ್ನು ಬಲಪಡಿಸಿದವು. ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಮೈಸೂರು, ಶಿವಮೊಗ್ಗ ಮುಂತಾದ ಪ್ರದೇಶಗಳಲ್ಲಿ ಹೋರಾಟಗಳು ಉಗ್ರವಾಗಿದ್ದವು. ಅನೇಕ ನಾಯಕರು ತಮ್ಮ ಜೀವಿತವನ್ನು ದೇಶದ ಸೇವೆಗೆ ಅರ್ಪಿಸಿದರು.

ಒಟ್ಟಾರೆ, ಅಸಹಕಾರ ಮತ್ತು ಕಾನೂನು ಭಂಗ ಚಳುವಳಿಗಳು ಕರ್ನಾಟಕದ ಜನಮನದಲ್ಲಿ ಸ್ವಾತಂತ್ರ್ಯದ ದೀಪವನ್ನು ಬೆಳಗಿಸಿದವು. ಇವುಗಳಿಂದ ಬೇರೂರಿದ ರಾಷ್ಟ್ರಪ್ರೇಮ, ಅಹಿಂಸಾ ತತ್ವ ಮತ್ತು ಜನಶಕ್ತಿ ಭಾರತದ ಅಂತಿಮ ಸ್ವಾತಂತ್ರ್ಯ ಚಳುವಳಿಗೆ ಭದ್ರ ನೆಲೆಯಾದವು. ಕರ್ನಾಟಕದ ಈ ಕೊಡುಗೆ ಭಾರತೀಯ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಸದಾ ಅಮರವಾಗಿರುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಎನ್. ಶಂಕರನಾರಾಯಣ, 2001, ಕರ್ನಾಟಕದ ಸ್ವಾತಂತ್ರ್ಯ ಚಳುವಳಿ ಇತಿಹಾಸ, ಪ್ರಜಾ ಪ್ರಕಾಶನ, ಮೈಸೂರು.
2. ಎಂ. ಚಿದಾನಂದ ಮೂರ್ತಿ, 1995 ಕರ್ನಾಟಕದ ರಾಷ್ಟ್ರೀಯ ಚಳುವಳಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
3. ಪಿ.ಸಿ. ಜೋಶಿ, 1983, Freedom Movement in Karnataka, People's Publishing House, New Delhi.
4. Thomson Edward, 1989, Indian National Movement, Akashdeep Publication, Delhi.
5. Karnataka Rajya Gazetteer, 1995, Dharwad District, Government of Karnataka Publication, Bangalore.
6. Jayashree S.Prabha, 2018, Intensity of Civil Disobedience Movement in North Karnataka, Gulbarga University, Gulbarga.
7. Chandrashekhar.K, 1997, Karanataka Charitre; Kannada Vishwavidyalaya Hampi.
8. Halappa G. S., 1964, History of Freedom Movement in Karnataka; Vol. – II, Government of Mysore Publication.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.